

ರೋಹಿತ್ ಲೈಟು ಹಾಕಿ, ಹಾಸಿಗೆಯಿಂದೆದ್ದು ಮತ್ತೆ ಚೇರಿನ ಬಳಿ ಬಂದು ಅದನ್ನು ಪರೀಕ್ಷಿಸುವ ದೃಷ್ಟಿಯಿಂದ ನೋಡಿದ. ಅಲ್ಲಿ ಯಾರಾದರೂ ಕೂತಿದ್ದ ಕುರುಹುಗಳೇನಾದರೂ ಇವೆಯೆ ಎಂದು ನೋಡಿದ. ಮರುಕ್ಷಣ 'ಅರೆ, ದೇಹವೇ ಇಲ್ಲದ ದೆವ್ವ ಕುರುಹು ಬಿಡಲು ಸಾಧ್ಯವೆ? ಇಲ್ಲ!' ಎನಿಸಿ ತನಗೆ ತಾನೇ ನಕ್ಕ.

ಬಾಗಿಲ ಬಳಿ ಬಂದು ಆಚೆ ಆಲಿಸಿದ. ಕಾರಿಡಾರಿನಲ್ಲಿ ಕುಡುಕರ ಜಗಳವನ್ನು ಯಾರೋ ನಿಯಂತ್ರಿಸಲು ಪ್ರಯತ್ನಿಸುತ್ತಿದ್ದರು. ರೋಹಿತ್ ಬಾಗಿಲು ತೆರೆದು ನೋಡಿದ. ಕಾರಿಡಾರಿನ ಮಧ್ಯದಲ್ಲಿಮೂವರು ಕಂಡರು. ಅವರಲ್ಲಿಬ್ಬರು ಕುಡಿತದ ಅಮಲಿನಲ್ಲಿ ತೂರಾಡುತ್ತಿದ್ದರು. ಇನ್ನೊಬ್ಬ ಥಾಮಸ್! ಥಾಮಸ್ ಅವರ ಜಗಳ ಬಿಡಿಸಲು ಪ್ರಯತ್ನಿಸುತ್ತಿದ್ದ. ಥಾಮಸ್ ತಲೆಯ ಆಕೃತಿಯನ್ನು ತಾನು ಕೆಲವು ನಿಮಿಷಗಳ ಹಿಂದೆ ಕುರ್ಚಿಯಲ್ಲಿ ನೋಡಿದೆ ಎನಿಸಿತು! ಛೇ... ಅದು ಹುಚ್ಚುತನ! ಇಲ್ಲೇ ಇದ್ದಾನಲ್ಲ ಥಾಮಸ್!? ರೂಮಿನಲ್ಲಿ ಹೇಗೆ ಕಾಣಿಸಲು ಸಾಧ್ಯ?

"ಏನದು ಗಲಾಟೆ? ಬೇರೆ ರೂಮಿನಲ್ಲಿರುವವರಿಗೆ ಯಾಕೆ ಡಿಸ್ಟರ್ಬ್ ಮಾಡ್ತೀರಿ?" ರೋಹಿತ್ ಜೋರು ಮಾಡಿದ.

"ಸಾ... ಸಾರಿ..." ಕುಡುಕರು ತೊದಲುತ್ತಾ ಕ್ಷಮಾಪಣೆ ಕೇಳಿ ಮುಂದೆ ಹೋದರು.

ಥಾಮಸ್ ಅವರನ್ನು ಅವರ ರೂಮಿನ ಬಾಗಿಲು ತೆಗೆದು ಒಳಗೆ ಕಳಿಸಿ ಬಾಗಿಲು ಹಾಕಿ ರೋಹಿತ್ ಬಳಿ ಬಂದ.

"ಬೆಳಿಗ್ಗೆ ಸಂಭಾವಿತರಂತೆ ಇರ್ತಾರೆ, ರಾತ್ರಿ ಕುಡಿದು ಗಲಾಟೆ ಮಾಡ್ತಾರೆ ಸಾರ್. ಒಳ್ಳೆಯವರೇ... ಏನ್ಮಾಡೋದು ನಾವು ಎಲ್ಲರನ್ನೂ ಸಂಭಾಳಿಸಬೇಕು. ಸಾರಿ ಸಾರ್ ಡಿಸ್ಟರ್ಬ್ ಆಯ್ತೇನೋ? ನಾಳೇನೂ ಇರೋ ಹಾಗಿದ್ರೆ ಥರ್ಡ್ ಫ್ಲೋರ್‌ನಲ್ಲಿ ರೂಮು ತಗೊಂಡುಬಿಡಿ ಸಾರ್. ಅಲ್ಲಿ ಈ ತರಾ ಕುಡಿದು ಬಂದು ಗಲಾಟೆ ಮಾಡೋರು ಯಾರೂ ಇಲ್ಲ.